ದಿನಾಂಕ ಃ 27.02.2024
ಅಸಲು ದಾವೆಃ 37/2015 ರಿಂದ 40/2015
ಡಿ.ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಹೆಚ್.ಎಂ. ರವರಿಂದ ಃ</u>**

ಪೂರ್ವಕ್ಕೆ ಃ ಶಿಂಷಾ ಹೊಳೆ, ಪಶ್ಚಿಮಕ್ಕೆ ಃ ಸರ್ವೆ ನಂ.6 ರ ಚಿಕ್ಕಣ್ಣರವರ ಜಮೀನು, ಉತ್ತರಕ್ಕೆ ಃ ಮಹಾಲಿಂಗ ಮತ್ತು ಇತರರು, ದಕ್ಷಿಣಕ್ಕೆ ಃ ಎನ್. ಸಿದ್ದೇಗೌಡ ಮತ್ತು ಇತರರು, ಈ ಜಮೀನು ನೋಡಿರುತ್ತೇನಾ ಎಂದರೆ ನೋಡಿರುವುದಿಲ್ಲ. ರಾಜು, ಪಟೇಲ್ ನಂಜೇಗೌಡ ಅವರ ಮಗ ರಾಜು, ಪಟೇಲ್ ತಮ್ಮೇಗೌಡರ ಮಗ ಶಿವನಂಜೇಗೌಡ, ಪಟೇಲ್ ತಮ್ಮೇಗೌಡರ ಮಗ ಚಿಕ್ಕತಮ್ಮೇಗೌಡ, ಪಟೇಲ್ ತಮ್ಮೇಗೌಡರ ಮಗ ಚಿಕ್ಕಮರಿ ಗೊತ್ತಾ ಎಂದರೆ ಗೊತ್ತಿಲ್ಲ. OS 38/2015 ರಲ್ಲಿ ಲಿಖಿತ ಹೇಳಿಕೆ ಸಲ್ಲಿಸಿರುತ್ತೇನೆ. ಆ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿ ಗೊತ್ತಿಲ್ಲ ಎಂದು ಹೇಳಿರುತ್ತೇನಾ ಎಂದರೆ ತಪ್ಪು ಚೆಕ್ಕುಬಂದಿ ಎಂದು ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಇದೆಯೋ ಇಲ್ಲವೋ ಎಂದರೆ ಸಾಕ್ಷಿಯು ಅವರು ತೆಗೆದುಕೊಂಡಿರುವುದು ಬೇರೆ ಕಡೆ ಇದೆ, ಇಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವನ್ನು ಲಿಖಿತ ಹೇಳಿಕೆಯಲ್ಲಿ ಬರೆದಿರುತ್ತೇನಾ ಎಂದರೆ ನೆನಪಿರುವುದಿಲ್ಲ. ವಾದಿಗಳು 5 ಎಕರೆ 27 ಗುಂಟೆಗೆ ದಾವೆ ಸಲ್ಲಿಸಿರುತ್ತಾರೆ. 5 ಎಕರೆ 27 ಗುಂಟೆ ಜಮೀನು 1905 ರಲ್ಲಿ ಖರೀದಿ ಮಾಡಿದ ಕ್ರಯಪತ್ರದ ಚೆಕ್ಕುಬಂದಿ ಒಳಗೆ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದು 6 ನೇ ಸರ್ವೆ ನಂಬರ್ ನಲ್ಲಿ ಬರಬಹುದು ಎಂದು ನುಡಿಯುತ್ತಾರೆ. 6 ನೇ ಸರ್ವೆ ನಂಬರ್ 7 ನೇ ಸರ್ವೆ ನಂಬರ್ ಆಗಿದ್ದರೆ ಆಗ ಸದರಿ ಜಮೀನು 7 ನೇ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಸರ್ವೆ ನಂಬರ್ 6 ಮತ್ತು 7 ಬೇರೆ ಬೇರೆ ಎಂದು ನುಡಿಯುತ್ತಾರೆ.

ಸರ್ವೆ ನಂ.6 ರ ಪೂರ್ವಕ್ಕೆ ಶಿಂಷಾ ಹೊಳೆ ಬರುವುದಿಲ್ಲ. ದಾವೆಯಲ್ಲಿ ಹಾಕಿರುವ ಚೆಕ್ಕು ಬಂದಿ ಸರ್ವೆ ನಂ.7 ರಲ್ಲಿ ಬರುವಂತ ಚೆಕ್ಕು ಬಂದಿ ಎಂದರೆ ಸಾಕ್ಷಿಯು ತಪ್ಪು ಚೆಕ್ಕುಬಂದಿ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಲಿಖಿತ ಹೇಳಿಕೆಯಲ್ಲಿ OS 38/2015 ರಲ್ಲಿ ವಾದಿಗಳು ಗೊತ್ತಿರುವುದಿಲ್ಲ ಎಂದು ಬರೆಸಿರುತ್ತೇನಾ ಎಂದರೆ

ನೆನಪಿರುವುದಿಲ್ಲ. ವಾದಿಗಳು ನಮ್ಮ ಗ್ರಾಮದ ಹಳೇಹಳ್ಳಿ ಊರಿನವರು. ವಾದಿಗಳು ಪಟೇಲ್ ವೀರೆಗೌಡರ ಮಗ ನಂಜೇಗೌಡ ಅವರು ಮೊಮ್ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ದಾವೆ ಸಲ್ಲಿಸಿದ ನಂತರ ವಾದಿಗಳ ಹಿನ್ನೆಲೆ ತಿಳಿದುಕೊಳ್ಳಲು ಪ್ರಯತ್ನ ಮಾಡಿರುತ್ತೇನಾ ಎಂದರೆ ಪ್ರಯತ್ನ ಮಾಡಿರುವುದಿಲ್ಲ. ದಾವಾ ಆಸ್ತಿ ಪಟೇಲ್ ವೀರೆಗೌಡರ ಮಗ ನಂಜೇಗೌಡರ ಭಾಗಕ್ಕೆ ಬಂದ ಆಸ್ತಿ ಎಂದರೆ ಸರಿಯಲ್ಲ. ವಾದಿಗಳು ಇವತ್ತಿನವರೆಗೂ ದಾವಾ ಆಸ್ತಿಯ ಸ್ವಾಧೀನಾನುಭದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನೋಡದೆ ಇರುವ ಕಾರಣ ವಾದಿಗಳು ಯಾರು ಎಂದು ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಂಗೇಗೌಡರ ಮಗ ಹೆಚ್.ಎಲ್.ಶಂಕರ, ನಿಂಗೇಗೌಡರ ಮಗ ನಂಜೇಶ ಮತ್ತು ಬುಕ್ಕೆಗೌಡರ ಮಗ ಶಿವನಂಜೇಗೌಡ ಅವರನ್ನು ನೋಡಿರುತ್ತೇನೆ. ಅವರುಗಳು 5 ಎಕರೆ 27 ಗುಂಟೆಗೆ ದಾವೆ ಹೂಡಿರುತ್ತಾರೆ. ಅವರು ಹಾಕಿದ ದಾವಾ ಆಸ್ತಿಯ ಚೆಕ್ಕುಬಂದಿ ಹೇಳಲು ಆಗುತ್ತದೆಯಾ ಎಂದರೆ ಮರೆತಿರುತ್ತೇನೆ. ಸಾಕ್ಷಿಯು ಸ್ವತಃ ಸರ್ವೆ ನಂಬರ್ 7 ರ ನಮ್ಮ ಚೆಕ್ಕು ಬಂದಿ ತೋರಿಸಿ ದಾವೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ಪೂರ್ವಕ್ಕೆ ಃ ಶಿಂಷಾ ನದಿ ಃ ಪಶ್ಚಿಮಕ್ಕೆ ಃ ಚಿಕ್ಕಣ್ಣರವರ ಸರ್ವೆ ನಂ.6 ರ ಜಮೀನು, ಉತ್ತರಕ್ಕೆ ಃ ಕಿರಂಗೂರು ಎಲ್ಲೆ, ದಕ್ಷಿಣಕ್ಕೆ ಃ ಮಹಾಲಿಂಗ ಮತ್ತು ಇತರರ ಜಮೀನು, ಈ ಚೆಕ್ಕು ಬಂದಿ ಸರ್ವೆ ನಂ.7 ರ ಉತ್ತರ ಭಾಗಕ್ಕೆ ಅನ್ವಯ ಆಗುತ್ತದೆ ಎಂದರೆ ಸರಿಯಲ್ಲ. ಈ ಚೆಕ್ಕುಬಂದಿ ಯಾವ ಭಾಗಕ್ಕೆ ಅನ್ವಯ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 7 ರ ಉತ್ತರಕ್ಕೆ ಕಿರಂಗೂರು ಎಲ್ಲೆ ಬರುತ್ತದೆ ಎಂದರೆ ಸರಿ. ಕಿರಂಗೂರು ಎಲ್ಲೆಯ ದಕ್ಷಿಣ ಭಾಗಕ್ಕೆ ಇರುವ 5 ಎಕರೆ 27 ಗುಂಟೆಗೆ OS 39/2015 ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. 5 ಎಕರೆ 27 ಗುಂಟೆ ಜಮೀನು 1905 ರಲ್ಲಿ ಕೊಂಡುಕೊಂಡ 20 ಎಕರೆ 24 ಗುಂಟೆ ಜಮೀನಿನ ಉತ್ತರ ಭಾಗದ ಜಮೀನು ಎಂದರೆ ಸರಿಯಲ್ಲ. ಆ ಚೆಕ್ಕುಬಂದಿ ನಾನು ಬರೆಸಿಕೊಂಡೆ ಎಂದು ಹೇಳಿದ ಕ್ರಯಪತ್ರದ ಚೆಕ್ಕುಬಂದಿ ಒಳಗಡೆ ಬರುತ್ತದೆಯಾ ಇಲ್ಲ ಬೇರೆ ಬರುತ್ತದೆಯಾ ಎಂದರೆ ಸಾಕ್ಷಿಯು ಕ್ರಯಪತ್ರದ ಚೆಕ್ಕುಬಂದಿ ಒಳಗಡೆ ಬರುತ್ತದೆ ಎಂದು ನುಡಿಯುತ್ತಾರೆ. ನಿಂಗೇಗೌಡ ಮತ್ತು ಬುಕ್ಕೇಗೌಡ ಅಣ್ಣತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ವಾದಿಗಳು ಅವರ ತಾತನ ಕಾಲದಿಂದ ದಾವ ಆಸ್ತಿಯ ಅನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1905 ರ ಕ್ರಯಪತ್ರದಲ್ಲಿ ಹೆಸರಿಸಿರುವ 4 ಜನರ ಪೈಕಿ ನಿಂಗ ಅವರ ಮೊಮ್ಮಕ್ಕಳು ವಾದಿಗಳು ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ನಿರಂತರವಾಗಿ ದಾವಾ ಆಸ್ತಿಯ ಅನುಭವದಲ್ಲಿ ಇದ್ದರೂ ಕೂಡ ಅವರ ಆಸ್ತಿಯನ್ನು

ಅಕ್ರಮವಾಗಿ ಪಡೆದುಕೊಳ್ಳಲು ನಾನು ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರಿಗೆ ಯಾವುದೇ ಹಕ್ಕು ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.